**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ 34/2024**

**ದಿನಾಂಕಃ 06.08.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 1 (ಚಾ.ಸಾ.1)**

| | | |
|---|---|---|
| **ಹೆಸರು** | ಃ | **ಪ್ರಶಾಂತ್ ಸಿ.ಎಂ. ಗೌಡ** |
| **ತಂದೆಯ ಹೆಸರು** | ಃ | **ಲೇಟ್ ಪಿ.ಮಹದೇವಯ್ಯ** |
| **ವಯಸ್ಸು** | ಃ | **36 ವರ್ಷ** |
| **ಉದ್ಯೋಗ** | ಃ | **ಕನ್ಸಟ್ರಕ್ಷನ್ ಕಂಪನಿಯ ಮಾಲೀಕ** |
| **ವಾಸ ಸ್ಥಳ** | ಃ | **ಬೆಂಗಳೂರು** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಮೃತ ಮಹದೇವಯ್ಯ ನನ್ನ ತಂದೆ. ಅವರು ಚಕ್ಕೆರೆ ಗ್ರಾಮದ ವಡ್ಡರದೊಡ್ಡಿಯಲ್ಲಿ ತೋಟದ ಮನೆಯಲ್ಲಿ ವಾಸವಿದ್ದರು. ನಾನು ಬೆಂಗಳೂರಿನಲ್ಲಿ ನಮ್ಮ ತಾಯಿ ಮತ್ತು ತಾತ-ಅಜ್ಜಿಯ ಜೊತೆ ವಾಸವಿದ್ದೆನು.

**2.** ನನ್ನ ತಂದೆಗೆ ಸಂಬಂಧಪಟ್ಟ ಸಿವಿಲ್ ಕೇಸುಗಳು ರಾಮನಗರ ನ್ಯಾಯಾಲಯಗಳಲ್ಲಿ ಇದುದ್ದರಿಂದ ಬೆಂಗಳೂರಿನಿಂದ ಓಡಾಡುವುದು ಕಷ್ಟವಾಗುತ್ತದೆ ಎಂದು ವಡ್ಡರದೊಡ್ಡಿಯ ತೋಟದ ಮನೆಯಲ್ಲಿ ವಾಸವಿರುತ್ತಿದ್ದರು. ದಿಃ**01.12.2023** ರಂದು ನನ್ನ ತಂದೆ ರಾಮನಗರದಲ್ಲಿ ಅವರ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ಸು ತೆರಳಿರುತ್ತಾರೆ. ದಿಃ**02.12.2023** ರಂದು ಅವರ ಸ್ನೇಹಿತರಾದ ಮಾದೇಗೌಡ ನನಗೆ ಫೋನ್ ಮಾಡಿ ಮನೆಯ ಬಾಗಿಲು ತೆರೆದಿದೆ, ನಿನ್ನ ತಂದೆ ಮತ್ತು ಕಾರು ನಂ. ಕೆಎ **42** ಎನ್ **0012** ಕಾಣಿಸುತ್ತಿಲ್ಲ, ಮನೆಯಲ್ಲಿ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ ಎಂದು ನನಗೆ ತಿಳಿಸಿದರು. ಅವರು ಮನೆಯಲ್ಲಿನ ಸ್ಥಿತಿ ನೋಡಿ ಸಂಶಯಾಸ್ಪದವಾಗಿದೆ ಎಂದು ತಿಳಿಸಿದರು.

**3.** ಅವರು ಫೋನ್ ಮಾಡಿದ ತಕ್ಷಣ ನಾನು ನನ್ನ ಸಂಬಂಧಿಕರಿಗೆ ಮತ್ತು ಅಣ್ಣನಿಗೆ ವಿಷಯವನ್ನು ತಿಳಿಸಿ, ನಾನು ಮತ್ತು ನನ್ನ ಅಣ್ಣ ವಡ್ಡರದೊಡ್ಡಿಗೆ ಸುಮಾರು ಮಧ್ಯಾಹ್ನ **12.30** ಗಂಟೆಗೆ ಬಂದೆವು. ನಾವುಗಳು ನಮ್ಮ ತಂದೆಯನ್ನು ಸುತ್ತಮುತ್ತ ಹುಡುಕಾಡಿದೆವು, ಅವರು ಸಿಗದೇ ಇದುದ್ದರಿಂದ ಕಾಣೆ ಆಗಿರುವ ಬಗ್ಗೆ ದೂರನ್ನು ಮಧ್ಯಾಹ್ನ **02.15** ಗಂಟೆಗೆ ಚನ್ನಪಟ್ಟಣದ ಪುರ ಪೊಲೀಸ್ ಠಾಣೆಗೆ ಕೊಟ್ಟೆನು. ಆ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿರುವ ದೂರಿನ ದೃಢೀಕೃತ ನಕಲನ್ನು ನಿಪಿ.**1** ಎಂದು ಗುರುತಿಸಲಾಯಿತು.

**4.** ನಂತರ ವಾಪಸ್ಸು ತೋಟದ ಮನೆಗೆ ಬಂದೆವು. ಆಗ ನಮ್ಮ ಜೊತೆಯಲ್ಲಿ ತನಿಖೆಗಾಗಿ ಪೊಲೀಸರು ತೋಟದ ಮನೆಗೆ ಬಂದರು. ನಾನು ನನ್ನ ತಂದೆಯ ಫೋನ್ ಗೆ ಬೆಳಿಗ್ಗೆಯಿಂದ ಕಾಲ್ ಮಾಡುತ್ತಿದ್ದರೂ ಅದು ಸ್ವಿಚ್ ಆಫ್ ಬರುತ್ತಿತ್ತು. ಸಂಜೆ **04.00** ಗಂಟೆಯ ವೇಳೆಗೆ ನಾನು ನನ್ನ ತಂದೆಯ ಫೋನ್ ಗೆ ರಿಂಗ್ ಮಾಡಿದಾಗ ಅದು ರಿಂಗ್ ಆಯಿತು. ಯಾರೋ ಅಪರಿಚಿತ ವ್ಯಕ್ತಿ ರಿಸೀವ್ ಮಾಡಿ, ಮಾತನಾಡಲಿಲ್ಲ ನಾನು ಪದೇ ಪದೇ ಯಾರು ನೀವು ಎಂದು ಕೇಳುತ್ತಿದ್ದೆನು, ಆಗ ಅವರು ಆಮೇಲೆ ಮಾಡುತ್ತೇನೆ ಎಂದು ಹೇಳಿ ಫೋನ್ ಕಟ್ ಮಾಡಿ ಸ್ವಿಚ್ ಆಫ್ ಮಾಡಿದರು.

**5.** ನಂತರ ನಮ್ಮ ತಂದೆಯನ್ನು ಎಲ್ಲಾ ಕಡೆ ಹುಡುಕುತ್ತಿದ್ದೆವು. ದಿಃ**03.12.2023** ರಂದು ಸಂಜೆ **04.00** ಗಂಟೆಗೆ ಇನ್ನೊಂದು ದೂರನ್ನು ನನ್ನ ತಂದೆಯನ್ನು ಯಾರೋ ಅಪಹರಣ ಮಾಡಿದ್ದಾರೆ ಎಂದು ಪೊಲೀಸ್ ಠಾಣೆಗೆ ಕೊಟ್ಟಿದ್ದೇನೆ. ಆ ದೂರನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮತ್ತು ಸಾಕ್ಷಿಯ ರುಜುವನ್ನು ನಿಪಿ.**2** ಮತ್ತು **2**(ಎ) ಎಂದು ಗುರುತಿಸಲಾಯಿತು.

**6.** ನಂತರ ಸಂಜೆ **05.00-06.00** ಗಂಟೆಯ ಒಳಗೆ ಪೊಲೀಸ್ ಟೀಮ್ ನವರು ಮತ್ತು ಫೊರೆನ್ಸಿಕ್ ಟೀಮಿನವರು ತೋಟದ ಮನೆಗೆ ಬಂದರು. ನಂತರ ಅವರು ಅಲ್ಲಿ ತನಿಖೆಯನ್ನು ಸಂಜೆ **05.00** ರಿಂದ **06.00** ಗಂಟೆಯವರೆಗೆ ಮಾಡಿದರು.

ತನಿಖೆಯ ಸಮಯದಲ್ಲಿ ಬೇರೆ ಯಾವುದಾದರೂ ಕುರುಹು ಸಿಗುತ್ತದೆಯಾ ಎಂದು ನೋಡಿದರು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿ ಅವರ ರುಜುವನ್ನು ಗುರುತಿಸಿದ್ದಾರೆ. ಸ್ಥಳ ಮಹಜರ ಮತ್ತು ಸಾಕ್ಷಿಯ ರುಜುವನ್ನು ನಿಪಿ.3 ಮತ್ತು 3(ಎ) ಎಂದು ಗುರುತಿಸಲಾಯಿತು. ನಂತರ ಅವರು ಅಲ್ಲಿಂದ ಹೊರಟು ಹೋದರು. ನಂತರ ನಾವು ಸಾಮಾಜಿಕ ಜಾಲತಾಣದಲ್ಲಿ ನಮ್ಮ ತಂದೆಯು ಕಾಣೆಯಾಗಿರುವ ಬಗ್ಗೆ ಪ್ರಕಟಣೆಗಳನ್ನು ಕೊಟ್ಟೆವು.

**7.** ದಿಃ**03.12.2023** ರಂದು ರಾತ್ರಿ **09.30** ಗಂಟೆಗೆ ಪೊಲೀಸ್ ನವರು ನನಗೆ ಫೋನ್ ಮಾಡಿ ನನ್ನ ತಂದೆಯ ಕಾರು ಸಿಕ್ಕಿದೆ ಎಂದು ಅದು ಚಾಮರಾಜನಗರದ ರಾಮಪುರ ಗ್ರಾಮದ ಸರ್ಕಾರಿ ಆಸ್ಪತ್ರೆಯ ಮುಂಭಾಗದಲ್ಲಿ ನಿಂತಿದೆ ಎಂದು ತಿಳಿಸಿದರು. ನಂತರ ನಾನು ನನ್ನ ಸಂಬಂಧಿಕರು ರಾಮಪುರ ಗ್ರಾಮಕ್ಕೆ ಹೋದೆವು. ನಾವು ಹೋಗುವಷ್ಟರಲ್ಲಿ ಮಧ್ಯ ರಾತ್ರಿ **12.30** ಗಂಟೆ ಆಗಿತ್ತು. ಅಲ್ಲಿ ನನ್ನ ತಂದೆಯ ಕಾರನ್ನು ನೋಡಿದೆವು. ನಾವು ಆ ಜಾಗಕ್ಕೆ ಹೋಗುವದರೊಳಗೆ ಪೊಲೀಸರು, ಡಾಗ್ಸ್ ಸ್ಕ್ವಾಡ್ ಮತ್ತು ಫೊರೆನಿಕ್ಸ್ ಟೀಮ್ ನವರು ತನಿಖೆ ಮಾಡುತ್ತಿದ್ದರು. ಕಾರಿನ ಹಿಂಭಾಗದ ಇಂಡಿಕೇಟರ್ ಮೇಲೆ ರಕ್ತದ ಕಲೆ ಕಾಣುತ್ತಿತ್ತು. ಅಲ್ಲಿ ಪೊಲೀಸರು ಒಂದು ದಾಖಲೆಗೆ ನನ್ನ ರುಜು ತೆಗೆದುಕೊಂಡರು. ಆ ಸಮಯದಲ್ಲಿ ಇಬ್ಬರು ಸಾಕ್ಷಿಗಳು ಆ ದಾಖಲೆಗೆ ರುಜುಗಳನ್ನು ಹಾಕಿದ್ದಾರೆ. ಸಾಕ್ಷಿಯು ಮಹಜರನಲ್ಲಿ ಅವರ ರುಜುವನ್ನು ಗುರುತಿಸಿದ್ದಾರೆ. ಆ ಮಹಜರು ಮತ್ತು ಸಾಕ್ಷಿಯ ರುಜುವನ್ನು ನಿಪಿ.4 ಮತ್ತು 4(ಎ) ಎಂದು ಗುರುತಿಸಲಾಯಿತು.

**8.** ಮಹಜರ್ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಯಿತು. ಆ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 3 ಫೋಟೋಗಳನ್ನು ನೋಡಿ ಅದೇ ಫೋಟೋಗಳು ಎಂದು ಗುರುತಿಸಿದ್ದಾರೆ.

(ಈ ಹಂತದಲ್ಲಿ ಪಿಪಿ ರವರು ಫೋಟೋಗಳಿಗೆ ಸಂಬಂಧಪಟ್ಟಂತೆ ಸುಮಾರು ಪೆನ್ ಡ್ರೈವಗಳನ್ನು ಹಾಕಿ ನೋಡಬೇಕು ಎಂದು ಕಾಲಾವಕಾಶವನ್ನು ಕೋರಿದ್ದು, ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ. ರೇಣುಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕಃ **06.08.2025**
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

**9.**

**10.**

**11.**

**12.**

**13.**

**14.**

**15.**

**16.**

**17.**

**18.**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ., ವಕೀಲರಿಂದಃ</u>

**4.**

**5.**

<u>ಮರುವಿಚಾರಣೆಃ ಇಲ್ಲ.</u>

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ. ರೇಣುಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ವಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

**ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**